IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಯಲ್ಲಿ ಭಾಷಾವಾರು ರಾಜ್ಯಗಳು : ಪ್ರಸ್ತುತತೆ

# LINGUSTIC SATES IN DR. B.R AMBEDKAR THINKING: RELEVANCE

**ಲೇಖಕರು**

**ಡಾ. ವಿರುಪಾಕ್ಷಪ್ಪ ವಾಯ್.ಕೆ,**

**ರಾಜ್ಯಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು,**

**ಮಹಾಂತಸ್ವಾಮಿ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿ.**

***ಪೀಠಿಕೆ:***

ಡಾ. ಬಿ.ಆರ್ ಅಂಬೇಡ್ಕರ್ ಭಾರತದ ಸಂವಿಧಾನ ಶಿಲ್ಪಿ, ಅವರೊಬ್ಬ ಮಾನವಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ ಮತ್ತು ರಾಷ್ಟ್ರೀಯವಾದಿಯಾಗಿದ್ದಾರೆ[೧]. ೧೯೪೭ರ ಭಾರತದ ಸ್ವಾತಂತ್ರ್ಯ ಸಂಪಾದನೆಯ ನಂತರ ಭಾಷಾ ರಾಜಕಾರಣಕ್ಕೆ ಸಂಬಂಧಿಸಿದಂತೆ ಎರಡು ವಿಷಯಗಳು ವ್ಯಕ್ತಗೊಂಡಿದ್ದವು.[೨] ಅವುಗಳಲ್ಲಿ ಮೊದಲನೆಯದಾಗಿ ಭಾಷಾವಾರು ರಾಜ್ಯಗಳ (ಪ್ರಾಂತ್ಯಗಳ) ಸಮಸ್ಯೆ, ಎರಡನೆಯದಾಗಿ ರಾಷ್ಟ್ರೀಯ ಭಾಷೆಯ ಸಮಸ್ಯೆಯಾಗಿದ್ದವು. ಇಂತಹ ಪರಿಸ್ಥಿತಿಯಲ್ಲಿ ಭಾರತಕ್ಕೆ ಸಂಯುಕ್ತ ಮಾದರಿಯ ಸರ್ಕಾರವೇ ಸೂಕ್ತವಾದದು ಎಂಬುವುದನ್ನು ಮನಗಂಡಿದ್ದ ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರ ಸರ್ಕಾರದ ಅಧಿಕೃತ ಭಾಷೆಯೇ ರಾಜ್ಯದ ಅಧಿಕೃತ ಭಾಷೆಯಾಗಿರಬೇಕೆಂಬ ಷರತ್ತಿನೊಂದಿಗೆ[೩] ಭಾಷಾವಾರು ರಾಜ್ಯಗಳ ರಚನೆಗೆ ಸಮ್ಮತಿಸಿದ್ದರು.

ಭಾರತವು ಐತಿಹಾಸಿಕವಾಗಿ ಬಹುಸಂಸ್ಕೃತಿ, ಬಹುಭಾಷಿಕರನ್ನು ಒಳಗೊಂಡ ದೇಶವಾಗಿದೆ. ಭಾರತದಲ್ಲಿ ಜರುಗಿದ ಹಲವು ಚಳುವಳಿಗಳು ಮತ್ತು ಚರ್ಚೆಯ ಮೂಲಕವಾಗಿ ಆಯಾ ಭಾಷಿಕರಿಗೆ ಪ್ರತ್ಯೇಕ ರಾಜ್ಯವಿರುವುದು ಪ್ರಜೆಗಳ ಹಾಗೂ ಪ್ರಜಾಪ್ರಭುತ್ವದ ಯಶಸ್ವಿಗೆ ಸಹಾಯಕಾರಿಯಾಗಿದೆ. ಭಾರತದಲ್ಲಿ ಬಹುತ್ವತೆ ಎಂಬುದು ಎಲ್ಲಾ ಪ್ರದೇಶಗಳಲ್ಲಿ ಚದುರಿ ಹೋಗಿರುವುದರಿಂದ ಭಾಷೆ, ಧರ್ಮ, ಜನಾಂಗ ಹೀಗೆ ಯಾವುದರ ಆಧಾರದ ಮೇಲಾಗಲೀ ಪ್ರತ್ಯೇಕ ರಾಜ್ಯದ ರಚನೆ ಸಾಧ್ಯವಿಲ್ಲ. ಆದ್ದರಿಂದ್ದ ಅಲ್ಪಸಂಖ್ಯಾತರ ಹಕ್ಕುಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದರ ಮೂಲಕ ಸರ್ವ ಪ್ರಜೆಗಳ ಹಿತರಕ್ಷಣೆಗೆ ಮತ್ತು ಪ್ರಜಾಪ್ರಭುತ್ವದ ತತ್ವಗಳು ಅನುಷ್ಠಾನಗೊಳ್ಳಲು ಭಾಷಾ ಆಧಾರಿತ ರಾಜ್ಯಗಳು ಅವಶ್ಯಕ ಎಂಬುವುದು ಅಂಬೇಡ್ಕರ ನಿಲುವಾಗಿತ್ತು.

***ಭಾಷೆ :***

ಜೀವಿಗಳಲ್ಲಿ ಅತಿ ಶ್ರೇಷ್ಠವಾದ ಮಾನವ ವರ್ಗವನ್ನು ದೇವರು ಸೃಷ್ಟಿಸಿದ ಎಂಬ ವಾದವನ್ನು ಒಪ್ಪುವುದಾದರೆ, ಅಷ್ಟೇ ಶ್ರೇಷ್ಠವಾದ ಭಾಷೆಯನ್ನು ಮಾನವ ಸೃಷ್ಟಿಸಿಕೊಂಡಿದ್ದಾನೆ ಎಂಬುದನ್ನೂ ಒಪ್ಪಲೇಬೇಕು. ಇನ್ನೂ ಒಂದು ಹೆಜ್ಜೆ ಮುಂದುವರೆದು ಭಾಷೆಗೆ ತಕ್ಕ ಲಿಪಿಯನ್ನು ರೂಢಿಸಿಕೊಂಡ ಮಾನವ, ನಾಗರಿಕತೆಯ ಆರಂಭಕ್ಕೆ ನಾಂದಿ ಹಾಡಿದ್ದಾನೆ. ತಾನು ಸೃಷ್ಟಿಸಿಕೊಂಡ ಭಾಷೆ ಮತ್ತು ಲಿಪಿಯಿಂದಾಗಿ ಇತರ ಪ್ರಾಣಿ ವರ್ಗದಿಂದ ವಿಭಿನ್ನವಾಗಿದ್ದಾನೆ[೪].

ಜಗತ್ತಿನಲ್ಲಿ ಪ್ರತಿಯೊಂದು ಭಾಷೆಗೂ ತನ್ನದೇ ಆದ ಇತಿಹಾಸವಿದೆ, ವರ್ಚಸ್ಸಿದೆ. "ಒಂದು ಭಾಷೆಯ ಇತಿಹಾಸವು ಆ ಭಾಷೆಯನ್ನಾಡುವ ಜನಸಮುದಾಯದ ಸಾಂಸ್ಕೃತಿಕ ಜೀವನದ ಇತಿಹಾಸವಾಗಿರುತ್ತದೆ. ಸಾಹಿತ್ಯವು ಅತ್ಯುತ್ತಮ ಪ್ರಜ್ಞಾಶಾಲಿಗಳ ಅಥವಾ ಕನಿಷ್ಠಪಕ್ಷ ವಿಶೇಷವಾಗಿ ಮಾತನಾಡುವುದರ ಚಿಂತನೆಗಳನ್ನು, ಆಲೋಚನೆಗಳನ್ನು ಮತ್ತು ಒಲವುಗಳನ್ನು ಪ್ರತಿಬಿಂಬಿಸುತ್ತದೆ. ಆದರೆ, ಭಾಷೆಯ ಬೆಳವಣಿಗೆಗೆ ಅದಕ್ಕೆ ಸಂಬಂಧಿಸಿರುವ ಎಲ್ಲ ಜನರೂ ಅಲ್ಪ ಪ್ರಮಾಣದಲ್ಲಾದರೂ ನೆರವಾಗುತ್ತಾರೆ. ಭಾಷೆಯು ಒಂದು ನಗರವಾಗಿದೆ. ಅದನ್ನು ಕಟ್ಟಲು ಪ್ರತಿಯೊಬ್ಬ ಮಾನವನು ಒಂದೊಂದು ಕಲ್ಲನ್ನು ತಂದಿರುತ್ತಾನೆ" ಎಂದು ಎಮರ್‌ಸನ್[೫] ಹೇಳಿದ್ದಾರೆ. ಈ ಅರ್ಥದಲ್ಲಿಯು ಭಾಷೆಯ ಬೆಳವಣಿಗೆಯು ಪ್ರಜಾಸತ್ತಾತ್ಮಕ ಸ್ವರೂಪದ್ದಾಗಿರುತ್ತದೆ.[೬] ಸದಾ ಬದಲಾವಣೆ, ಬೆಳವಣಿಗೆ ಹಾಗೂ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವುದು ಆ ಜನರ ಜೀವಂತ ಭಾಷೆ. ಒಂದು ಜನಾಂಗಕ್ಕೂ ಮತ್ತು ಆ ಜನಾಂಗದ ಆಡು ಭಾಷೆಗೂ ಸದಾ ನಿಕಟ ಸಂಬಂಧವಿರುತ್ತದೆ. ಒಂದು ರೀತಿಯಲ್ಲಿ ಆ ಜನಾಂಗದ ಮಾತೃಭಾಷೆ ಅವರೆಲ್ಲರನ್ನೂ ಒಂದುಗೂಡುವಂತೆ ಮಾಡುತ್ತದೆ. ಯುರೋಪಿನ ಇತಿಹಾಸವನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಸಾಮಾಜಿಕ ಜೀವನವನ್ನು ರೂಪಿಸಿಕೊಳ್ಳಲು ಹಾಗೂ ಒಂದು ರಾಷ್ಟ್ರ ತನ್ನದೇ ಆದ ಮನೋಧರ್ಮವನ್ನು ಬೆಳೆಸಿಕೊಳ್ಳಲು ಭಾಷೆಯ ಸ್ಥಾನ ಪ್ರಮುಖವಾಗಿದೆ. ಇದನ್ನೇ ಅರ್ನಾಲ್ಡ್ ಟಾಯ್ನಬಿ ಈ ರೀತಿ ಹೇಳಿರುವಂತೆ, "ಬೆಳೆಯುತ್ತಿರುವ ರಾಷ್ಟ್ರೀಯ ಪ್ರಜ್ಞೆ ಸಾಂಪ್ರದಾಯಿಕವಾಗಿ ಬಂದ ಗಡಿಗಳಿಗಾಗಲೀ ಅಥವಾ ಹೊಸದಾಗಿ ಸೇರಿಸಲ್ಪಟ್ಟ ಭೂಪ್ರದೇಶಗಳಿಗಾಗಲೀ ಅಂಟಿಕೊಂಡಿರದೇ ಬಹುತೇಕ

ಮಾತೃಭಾಷೆಗೆ ಹೆಚ್ಚು ಗಮನಕೊಟ್ಟಿದೆ".[೭] ಈ ಹಿನ್ನಲೆಯಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರು ಪ್ರತಿಪಾದಿಸುವ ಭಾಷಾವಾರು ರಾಜ್ಯಗಳ ರಚನೆಯ ವಿಷಯಗಳು ಇಂದಿಗೂ ಪ್ರಸ್ತುತವಾಗಿವೆ.

## ಭಾರತದಲ್ಲಿ ಭಾಷೆಗಳು :

೧೩೦ ಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯಿರುವ ಭಾರತದಲ್ಲಿ ಸಾವಿರಾರು ಭಾಷೆ, ಉಪಭಾಷೆಗಳು ಬಳಕೆಯಲ್ಲಿವೆ. ಕೆಲವು ಲಿಪಿಸಹಿತ ಮತ್ತು ಹಲವು ಲಿಪಿರಹಿತವಾಗಿವೆ. ಭಾರತದ ಮಟ್ಟಿಗೆ ಹೇಳುವುದಾದರೆ ಅದೊಂದು ಭಾಷೆಗಳ ವಸ್ತುಸಂಗ್ರಹಾಲಯವೇ ಹೌದು. ಒಂದು ಅಂದಾಜಿನ ಪ್ರಕಾರ ಜಗತ್ತಿನಲ್ಲಿ ಒಟ್ಟು ೬೦೦೦ ಭಾಷೆಗಳಿವೆ. ೧೯೭೧ ರ ಜನಗಣತಿಯ ದಾಖಲೆಯ ಪ್ರಕಾರ ಭಾರತ ಸಂವಿಧಾನದ ೮ನೇ ಷೆಡ್ಯೂಲಿನಲ್ಲಿ ಮಾನ್ಯತೆ ಪಡೆದ ೧೫ ಭಾಷೆಗಳಲ್ಲದೇ, ಮಾನ್ಯತೆ ಪಡೆಯದ ೧೭೯ ಭಾಷೆಗಳು, ೫೪೪ ಉಪಭಾಷೆಗಳು ಮತ್ತು ೬೦೦೦ ಆಡುಭಾಷೆಗಳು ಪ್ರಚಲಿತವಿರುವುದಾಗಿ ತಿಳಿದುಬರುತ್ತದೆ.[೮] ಪ್ರಸ್ತುತ ಭಾರತ ಸಂವಿಧಾನದ ೮ನೇ ಅನುಸೂಚಿಯಲ್ಲಿ ೨೨ ಭಾಷೆಗಳನ್ನು ಮಾನ್ಯ ಮಾಡಲಾಗಿದೆ. ೧೦೦ ಕ್ಕಿಂತಲೂ ಹೆಚ್ಚು ಸಂವಿಧಾನೇತರ ಭಾಷೆಗಳಿವೆ. ೨೦೦೧ ರ ಅಂಕಿ–ಅಂಶದ ಪ್ರಕಾರ ೧೨೨ ಭಾಷೆಗಳು ಮತ್ತು ೨೩೪ ಮಾತೃಭಾಷೆಯನ್ನು ಮಾತನಾಡುವವರಿದ್ದಾರೆ.[೯]

೨೦೧೩ ರಲ್ಲಿ 'ಭಾರತದ ಜನಭಾಷೆಗಳ ಸರ್ವೇಕ್ಷಣೆ' (ಪಿ.ಎಲ್.ಎಸ್.ಐ.) ಹೊರಗೆಡವಿರುವ ಅಂಕಿ–ಅಂಶದ ಪ್ರಕಾರ ೭೮೦ ಭಾಷೆಗಳಿವೆ. ಇದರಲ್ಲಿ ೧೨೨ ಭಾಷೆಗಳನ್ನಾಡುವವರ ಸಂಖ್ಯೆ ೧೦,೦೦೦ ಕ್ಕಿಂತ ಕಡಿಮೆಯಿದೆ. ಕಳೆದ ೫೦ ವರ್ಷಗಳಲ್ಲಿ ೨೨೦ ಭಾಷೆಗಳು ಸಾವಿಗೀಡಾಗಿವೆ. ಪಶ್ಚಿಮ ಬಂಗಾಳ ರಾಜ್ಯವೊಂದರಲ್ಲಿ ೩೮ ವಿವಿಧ ಭಾಷೆಗಳನ್ನು ಮಾತನಾಡುವ ಜನರಿದ್ದು; ೯ ಲಿಪಿಗಳಿವೆ ಎಂದು ದಾಖಲಿಸಲಾಗಿದೆ. 'ಸರ್ಕಾರ ಹಾಗೂ ಜನರ ಬೆಂಬಲವಿಲ್ಲದಿದ್ದರೆ ಈ ಭಾಷೆಗಳಿಗೆ ಉಳಿಗಾಲವಿಲ್ಲ ಎಂದು ಪಿ.ಎಲ್.ಎಸ್.ಐ.ನ ಅಧ್ಯಕ್ಷ ಜಿ.ಎನ್. ದೇವಿ ಎಚ್ಚರಿಸಿದ್ದಾರೆ".[೧೦] ಮುಂದಿನ ೫೦ ವರ್ಷಗಳ ಅವಧಿಯಲ್ಲಿ ೧೫೦ ಭಾಷೆಗಳು ಕಣ್ಮರೆಯಾಗುವ ಸಾಧ್ಯತೆಯಿದೆ ಎಂದು ಸೂಚಿಸಿದ್ದಾರೆ.[೧೧] ಆದ್ದರಿಂದ ಭಾಷೆಯ ಉಳಿವು ಮತ್ತು ಬೆಳವಣಿಗೆ ಭಾಷಾವಾರು ರಾಜ್ಯಗಳು ಸಹಕಾರಿಯಾಗಿವೆ.

## *ರಾಷ್ಟ್ರ ಮತ್ತು ಭಾಷೆ :*

ರಾಷ್ಟ್ರ ಮತ್ತು ಭಾಷೆ ಒಂದಕ್ಕೊಂದು ಅಂಟಿದ ನಂಟು. ಒಂದು ರಾಷ್ಟ್ರದ ಭಾಷೆ ಅಥವಾ ಭಾಷೆಗಳು ಆ ರಾಷ್ಟ್ರದ ಏಕತೆಯನ್ನು ಕಾಯ್ದಿಡುವಲ್ಲಿಯ ಪಾತ್ರ ಪ್ರಮುಖವಾದದ್ದು. ಸ್ಟಾಲಿನ್ ಹೇಳುವಂತೆ "ಒಂದು ರಾಷ್ಟ್ರವೆಂದರೆ ಚಾರಿತ್ರಿಕವಾಗಿ ಬೆಳೆದು ಬಂದ ಸ್ಥಿರ ಸಮುದಾಯದಿಂದ ಕೂಡಿದ್ದು, ಆ ಸಮುದಾಯದ ಸಂಸ್ಕೃತಿಯಲ್ಲಿ ಲೀನವಾಗಿರುವ ಭಾಷೆ, ಭೌಗೋಳಿಕತೆ, ಆರ್ಥಿಕ ಜೀವನ ಮತ್ತು ಜನರ ಮಾನಸಿಕ ಮಟ್ಟವಾಗಿರುತ್ತದೆ. ಆದ್ದರಿಂದ ಆರ್ಥಿಕ ಜೀವನ ಮತ್ತು ಮಾನಸಿಕ ಬೆಳವಣಿಗೆಯನ್ನು ರೂಪಿಸುವಲ್ಲಿ ಭಾಷೆಯು ಒಂದು ಪ್ರಮುಖ ಕಾರಣ ಎಂಬುದನ್ನು ತಳ್ಳಿಹಾಕುವಂತಿಲ್ಲ."[೧೨]

ಸಂಯುಕ್ತ ವ್ಯವಸ್ಥೆಯಲ್ಲಿ ಅಧಿಕಾರದ ಹಂಚಿಕೆ ಸಾಮಾನ್ಯವಾಗಿದ್ದು, ಅಧಿಕಾರವೆಂಬುದು ಪ್ರಜಾಪ್ರಭುತ್ವ ರಾಷ್ಟ್ರದೊಳಗಡೆ ಕೇಂದ್ರ, ರಾಜ್ಯ ಮತ್ತು ಗ್ರಾಮ ಪಂಚಾಯಿತಿಯವರೆಗೆ ಹಂಚಿಕೆಯಾಗಿರುತ್ತದೆ. ವೈವಿಧ್ಯತೆಯುಳ್ಳ ಭಾರತದಂತಹ ರಾಷ್ಟ್ರಕ್ಕೆ ಸಂಯುಕ್ತ ಮಾದರಿಯ ಸರ್ಕಾರ ಸೂಕ್ತವಾಗಿದ್ದು; ಸಂವಿಧಾನದ ಚೌಕಟ್ಟಿನಲ್ಲಿ ಹೊಂದಿಕೊಂಡು ಕೆಲಸ ನಿರ್ವಹಿಸಲು ಪ್ರತಿಯೊಂದು ಪ್ರಾಂತ್ಯವು ಭಾಷವಾರು ಪ್ರಾಂತ್ಯವಾಗಬೇಕೆಂಬುದು ಸರಿಯಾದ ಸಮರ್ಥನೆಯಾಗಿದೆ. ಇದಕ್ಕೆ ಪೂರಕವೆನ್ನುವಂತೆ ಆಯಾ ನಿರ್ದಿಷ್ಟ ಪ್ರದೇಶದಲ್ಲಿ ಬಹುಸಂಖ್ಯಾತರು ಮಾತನಾಡುವ ಪ್ರಾದೇಶಿಕ ಭಾಷೆಯನ್ನು ಆಡಳಿತದ ಭಾಷೆಯನ್ನಾಗಿ ಅಳವಡಿಸಿಕೊಂಡು ಬಂದಿರುವುದು ಇದಕ್ಕೆ ಪುಷ್ಠಿ ನೀಡಿದಂತಿದೆ.

## *ಭಾರತದಲ್ಲಿ ಭಾಷಾವಾರು ರಾಜ್ಯಗಳ ಹಿನ್ನಲೆ :*

ರಾಷ್ಟ್ರ ಮತ್ತು ಭಾಷೆಗಳ ನಡುವೆ ವಿಪರ್ಯಾಸಕರವಾದ ಕಂದರ ಸೃಷ್ಟಿಯಾದದ್ದು ತೀರ ಇತ್ತೀಚಿನದು. ಐತಿಹಾಸಿಕ ಯುಗಗಳಲ್ಲಿ ಭಾಷಾ ಸಮಸ್ಯೆಯಂಥ ಪಿಡುಗು ಕಂಡುಬಂದಂತಿಲ್ಲ. ರಾಜ್ಯ ರಕ್ಷಣೆ ಹಾಗೂ ರಾಜ್ಯ ವಿಸ್ತರಣಾ ದಾಹಕ್ಕಾಗಿ ಹೋರಾಟ ನಡೆಸಿ, ಜಯಶೀಲರಾದ ರಾಜರು ಸಾಮಾನ್ಯವಾಗಿ ಬಹುಜನರ ಪ್ರಾದೇಶಿಕ ಭಾಷೆಯನ್ನೇ ಆಡಳಿತ ಭಾಷೆಯನ್ನಾಗಿಸಿಕೊಳ್ಳುತ್ತಿದ್ದರು. ಆ ಪ್ರದೇಶದ ಬೆಳವಣಿಗೆಗೆ, ಸಾಹಿತ್ಯಕ್ಕೆ ಪ್ರೋತ್ಸಾಹವಿರುತ್ತಿತ್ತು. ಹೊರ ಭಾಷೆಗಳು ಆಡಳಿತ ಭಾಷೆಯಾಗಲು ವಿಫಲವಾಗುತ್ತಿದ್ದವು. ಮಹಮದಿಯರ ಆಳ್ವಿಕೆಯಲ್ಲಿ ಆಡಳಿತ ಭಾಷೆ ಪರ್ಶಿಯನ್ ಆಗಿದ್ದರೂ ಅದು ಜನಸಾಮಾನ್ಯರ ಭಾಷೆಯಾಗಿ ಪರಿಣಮಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಪರ್ಶಿಯನ್ ಜೊತೆಗೆ ಪ್ರಾದೇಶಿಕ ಭಾಷೆಗಳ ಬಳಕೆಯು ಅನಿವಾರ್ಯವಾಯಿತು. ರಾಷ್ಟ್ರ ಮತ್ತು ಭಾಷೆಗಳ ನಡುವಿನ ಸಮಸ್ಯೆಗಳು ಮೊದಲಿಗೆ ಕಾಣಿಸಿಕೊಂಡಿದ್ದು ಬ್ರಿಟಿಷ್‌ರ ಆಡಳಿತದ ಆರಂಭದಲ್ಲಿ. ಆದರೆ ಅವುಗಳು ಪ್ರಾರಂಭದ ಹಂತದಲ್ಲಿದ್ದುದರಿಂದ ಹಾಗೂ ಬ್ರಿಟಿಷರ ನೇರ ಕಾಳಜಿಯ ವ್ಯಾಪ್ತಿಗೆ ಅನ್ವಯಿಸದೇ ಇದ್ದುದರಿಂದ ಅಂತಹ ಸಮಸ್ಯೆಗಳು ಹೆಚ್ಚು ತೀವ್ರತೆ ಪಡೆಯಲಿಲ್ಲ. ಪ್ರೆಸಿಡೆನ್ಸಿಗಳಲ್ಲಿ ಬಹುಸಂಖ್ಯಾತರ ಭಾಷೆಯನ್ನು ಆಡಳಿತ ಭಾಷೆಯನ್ನಾಗಿಸಿಕೊಂಡು, ಒಟ್ಟಾರೆ ದೇಶದ ಮಟ್ಟದಲ್ಲಿ ಇಂಗ್ಲಿಷನ್ನು ಸಂಪರ್ಕ ಭಾಷೆಯನ್ನಾಗಿ ಬಳಸಲಾಗುತ್ತಿತ್ತು.[೧೩]

ಭಾಷೆಯ ಆಧಾರದ ಮೇಲೆ ಭಾರತವನ್ನು ವಿಭಜಿಸಬೇಕು ಎನ್ನುವ ಧ್ವನಿ ಕೇಳಬರತೊಡಗಿದ್ದು ಸ್ವಾತಂತ್ರ್ಯಾನಂತರದ ಅವಧಿಯಲ್ಲಷ್ಟೇ ಅಲ್ಲ. ವಸಾಹತು ಆಳ್ವಿಕೆಯ ಸಂದರ್ಭದಲ್ಲಿಯೇ ಈ ಕುರಿತು ಚಿಂತನೆಗಳು ಕಾಣಿಸಿಕೊಂಡಿದ್ದವು.[೧೪] ಭಾಷೆಯ ಆಧಾರದ ಮೇಲೆ ರಾಜ್ಯಗಳ/ಪ್ರಾಂತ್ಯಗಳ ರಚನೆಯ ಬೇಡಿಕೆಯೆಂಬುದು ೧೮೭೬ರ ನಂತರ ಆರಂಭಗೊಂಡಿತು. ಇದಕ್ಕಿಂತ ಪೂರ್ವದ ಬೇಡಿಕೆಗಳು ಸಾಂದರ್ಭಿಕವಾದವುಗಳು ಮತ್ತು ಸಂಘಟಿತವಾದವುಗಳಲ್ಲ. ಕ್ರಿ.ಶ. ೧೮೭೬ ಮತ್ತು ೧೯೦೨ ರಲ್ಲಿ ಒರಿಯಾ ಮಾಡನಾಡುವ ಜನರು ಪ್ರತ್ಯೇಕ ಪ್ರಾಂತ್ಯದ ಬೇಡಿಕೆಗಾಗಿ ಎರಡು ಮೆಮೋರಂಡಂಗಳನ್ನು (ಜ್ಞಾಪಕಪತ್ರ) ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ್ದರು.[೧೫] ಬ್ರಿಟಿಷ್ ಸರ್ಕಾರ ೧೮೨೯ ರಲ್ಲಿ ಬಂಗಾಳ ಪ್ರೆಸಿಡೆನ್ಸಿಯನ್ನು ವಿಸ್ತರಿಸುವ ಕೆಲಸವನ್ನು ಮಾಡಿತು. ಬಂಗಾಳ, ಬಿಹಾರ್, ಒರಿಸ್ಸಾ(ಉತ್ಕಲ)ಗಳು ಒಂದೇ ಪ್ರಾಂತ್ಯದಲ್ಲಿ ವಿಲೀನ ಆಗಿದ್ದವು. ಅಸ್ಸಾಂ ಪ್ರದೇಶ ಬಂಗಾಳ ಪ್ರಾಂತ್ಯದ ಅಧಿಕಾರಕ್ಕೆ ಒಳಪಟ್ಟಿದ್ದರೂ ಪ್ರತ್ಯೇಕ ಚೀಫ್ ಕಮೀಷನರ್ ಆಳ್ವಿಕೆಗೆ ಒಳಪಟ್ಟಿತ್ತು. ಬಂಗಾಳ ಪ್ರಾಂತ್ಯದಲ್ಲಿ ಬಂಗಾಳಿ ಮಾತನಾಡುವವರಲ್ಲದೆ ಇತರ ಭಾಷಿಕರು ಸೇರಿಕೊಂಡಿದ್ದರು. ೧೮೭೪ ರಲ್ಲಿ ಬಂಗಾಳ ಪ್ರಾಂತ್ಯದಲ್ಲಿದ್ದ ಸಿಲ್ಹೆಟ್ ಜಿಲ್ಲೆಯನ್ನು ಬ್ರಿಟಿಷರು ಅಸ್ಸಾಮಿನ ಆಡಳಿತದ ಪರಿಧಿಗೆ ಸೇರಿಸಿದರು. ಬ್ರಿಟಿಷರ ಈ ಕ್ರಮದಿಂದ ಅಸ್ಸಾಮಿ ಭಾಷಿಕರು ಮತ್ತು ಬಂಗಾಳಿ ಭಾಷಿಕರು ಅಸಮಾಧಾನಗೊಂಡರು. ಇದು ಭಾಷಾ ಚಳುವಳಿಗಳ ಹುಟ್ಟಿಗೆ ಕಾರಣವಾಯಿತು. ಆದ್ದರಿಂದ ಭಾಷಾವಾರು ಪ್ರಾಂತ್ಯದ ಚಳುವಳಿಯ ಮೂಲವನ್ನು ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಗುರುತಿಸಬಹುದು. ಈ ದಿಶೆಯಲ್ಲಿ ಅಗ್ರಗಣ್ಯರೆಂದರೆ 'ಒರಿಯಾ ಜನತೆ'.[೧೬] ಒರಿಸ್ಸಾ, ಬಿಹಾರ ಮತ್ತು ಬಂಗಾಳಗಳು ಸೇರಿ ರಚನೆ ಆಗಿದ್ದ ಬಂಗಾಳ ಪ್ರೆಸಿಡೆನ್ಸಿಯಲ್ಲಿ ಹಿಂದಿಯನ್ನೇ ಮಾತನಾಡುತ್ತಿದ್ದ

ಬಿಹಾರಿಗಳು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಹಾಗಾಗಿ ತಮ್ಮನ್ನು ಬಂಗಾಳದಿಂದ ಪ್ರತ್ಯೇಕಿಸಿ ಪ್ರತ್ಯೇಕ ಪ್ರಾಂತ್ಯದ ರಚನೆಯ ಬೇಡಿಕೆಯನ್ನು ಮುಂದಿಟ್ಟರು. ೧೯೦೩ರ ಹೊತ್ತಿಗೆ ಒರಿಯಾಗಳು "ಉತ್ಕಲ ಐಕ್ಯ ಪರಿಷತ್ತ" ಎನ್ನುವ ಸಂಘಟನೆಯೊಂದನ್ನು ಕಟ್ಟಿದರು. ಉತ್ತರ ಭಾರತದಲ್ಲಿ ಭಾಷೆಯ ಆಧಾರದ ಮೇಲೆ ನಡೆಯುತ್ತಿದ್ದ ಚಳುವಳಿಗಳ ಸಂದರ್ಭದಲ್ಲಿಯೇ, ದಕ್ಷಿಣ ಭಾರತದಲ್ಲೂ ಚಳುವಳಿಗಳು ಕಾಣಿಸಿಕೊಂಡವು. ೧೮೮೮ ರಲ್ಲಿ ಆರಂಭಗೊಂಡ 'ಮದ್ರಾಸು ಮಹಾಸಭೆ', ೧೮೯೦ ರಲ್ಲಿ ಧಾರವಾಡದಲ್ಲಿ ಹುಟ್ಟಿಕೊಂಡ 'ಕರ್ನಾಟಕ ವಿದ್ಯಾವರ್ಧಕ ಸಂಘ' ಮುಂತಾದವು ಆಯಾ ಪ್ರದೇಶದ ಜನತೆಯನ್ನು ಜಾಗೃತಗೊಳಿಸಿದವು. ಹೀಗೆ ಭಾಷಾವಾರು ರಾಜ್ಯಗಳ ರಚನೆಗೆ ದೀರ್ಘ ಇತಿಹಾಸವಿದೆ.

## ಡಾ. ಬಿ.ಆರ್ ಅಂಬೇಡ್ಕರ್ ಚಿಂತನೆಯಲ್ಲಿ ಭಾಷಾವಾರು ರಾಜ್ಯಗಳು :

ಡಾ. ಬಿ.ಆರ್ ಅಂಬೇಡ್ಕರ್ ೧೯೪೮ ರಲ್ಲಿ 'ಭಾಷಾವಾರು ಪ್ರಾಂತ್ಯಗಳ ಆಯೋಗ'ಕ್ಕೆ ಸಲ್ಲಿಸಿದ ಮನವಿ ಪತ್ರದಲ್ಲಿ[೧೭] "ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ರಾಷ್ಟ್ರೀಯ ಭಾವನೆಗಳ ಬೆಳವಣಿಗೆಗೆ ಅಪಾಯ ಉಂಟಾಗುತ್ತದೆ. ಆದರೆ, ಭಾಷಾವಾರು ಪ್ರಾಂತ್ಯಗಳ ರಚನೆಗೆ ಆಧಾರಗಳಿರುವುದರಿಂದ ಕೇಂದ್ರದ ಅಧಿಕೃತ ಭಾಷೆಯೇ ರಾಜ್ಯದ ಆಡಳಿತ ಭಾಷೆಯಾಗಿರಬೇಕೆಂಬ ಷರತ್ತಿನೊಂದಿಗೆ ಭಾಷಾವಾರು ರಾಜ್ಯಗಳ ರಚನೆಯ ನಿರ್ಧಾರವನ್ನು ಪ್ರಕಟಿಸಿದ್ದರು. ಭಿನ್ನ ಜನಾಂಗ, ಭಾಷೆಗಳಿಂದ ಕೂಡಿದ ಅಥವಾ ಕಲಬೆರೆಕೆಯ ರಾಜ್ಯಕ್ಕಿಂತ ಒಂದೇ ಜನಾಂಗದಿಂದ ಕೂಡಿದ ಭಾಷಾವಾರು ರಾಜ್ಯವು ಪ್ರಜಾಪ್ರಭುತ್ವದ ಕಾರ್ಯಾಚರಣೆಗೆ ಅನುಕೂಲಕರವಾದದು ಎಂದಿದ್ದಾರೆ".

ಡಾ. ಬಿ.ಆರ್ ಅಂಬೇಡ್ಕರ ಅವರ ಭಾಷಾವಾರು ರಾಜ್ಯಗಳ ರಚನೆಯ ವಿಷಯಗಳು "ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿಯ ವಿಮರ್ಶೆಯಾಗಿತ್ತು".[೧೮] ರಾಜ್ಯ ಪುನರ್ವಿಂಗಡಣಾ ಆಯೋಗವು "ಒಂದು ಭಾಷೆ ಒಂದು ರಾಜ್ಯದ ನಿಯಮ"ವನ್ನು ಅನುಸರಿಸಿದ್ದು ತಪ್ಪಾಗಿದೆ. ರಾಜಕೀಯ ಅನುಕೂಲದ ವಿಷಯಗಳನ್ನು ಅಲಕ್ಷಿಸಿದೆ. ಭಾರತದ ಉದ್ಧಾಗಲಕ್ಕೂ ಈ ತರಹದ ರಾಜ್ಯಗಳನ್ನು ರಚಿಸುವುದರಿಂದ ಒಂದು ಕಡೆ ವಿಶಾಲ ರಾಜ್ಯಗಳು ಮೊತ್ತೊಂದು ಕಡೆ ಚಿಕ್ಕ ರಾಜ್ಯಗಳು ರಚನೆಯಾಗುತ್ತವೆ. ಇಂತಹ ಬೆಳವಣಿಗೆ ಒಕ್ಕೂಟದ ಒಳಗಡೆ ಸಂಘರ್ಷಕ್ಕೆ ಕಾರಣವಾಗುತ್ತವೆ ಎಂದಿದ್ದಾರೆ.

## ಉದ್ದೇಶಗಳು :

1. ಡಾ. ಬಿ.ಆರ್ ಅಂಬೇಡ್ಕರ್ ಚಿಂತನೆಯಲ್ಲಿ ಭಾಷಾವಾರು ರಾಜ್ಯಗಳ ಪರಿಕಲ್ಪನೆಯನ್ನು ಅರಿತುಕೊಳ್ಳುವುದು.
2. ಡಾ. ಬಿ.ಆರ್ ಅಂಬೇಡ್ಕರ್ ಪ್ರತಿಪಾದಿಸುವ 'ಒಂದು ರಾಜ್ಯ ಒಂದು ಭಾಷೆ ನಿಯಮದ' ಅಗತ್ಯತೆಯನ್ನು ಕಂಡುಕೊಳ್ಳುವುದು.
3. ಅಂಬೇಡ್ಕರ್ ಅವರ ಅಲ್ಪಸಂಖ್ಯಾತರ ಹಿತರಕ್ಷಣೆಯ ಉದ್ದೇಶವನ್ನು ಅರಿತುಕೊಳ್ಳುವುದು.

## ಭಾಷವಾರು ರಾಜ್ಯದ ಅರ್ಥ :

ಸಂಯುಕ್ತ ವ್ಯವಸ್ಥೆಯೊಳಗಡೆ ಘಟಕ ರಾಜ್ಯಗಳನ್ನು ಸ್ಥಾಪಿಸುವಾಗ ಒಂದು ಭಾಷೆಯನ್ನು ಮಾತನಾಡುವ ಎಲ್ಲಾ ಜನರನ್ನು ಒಂದು ರಾಜ್ಯದ ಹದ್ದುಬಸ್ತಿನಲ್ಲಿ ತರಬೇಕು ಎಂಬ ಅರ್ಥ ಬರುತ್ತದೆ. ಮೊತ್ತೊಂದು ಅರ್ಥದಲ್ಲಿ ಒಂದು ಭಾಷೆಯನ್ನಾಡುವ ಜನರನ್ನು ಹಲವು ರಾಜ್ಯಗಳಲ್ಲಿ ವಿಂಗಡಿಸಬಹುದು. ಈ ಹಿನ್ನಲೆಯಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರು 'ಒಂದು ರಾಜ್ಯ ಒಂದು ಭಾಷೆಯ ತತ್ವ'ವನ್ನು ಪ್ರತಿಪಾದಿಸುತ್ತಾರೆ.

ಡಾ. ಬಿ.ಆರ್ ಅಂಬೇಡ್ಕರ್ ಅವರು ಭಾಷಾವಾರು ರಾಜ್ಯಗಳೆಂದರೇ ತಮ್ಮ ತಮ್ಮ ಭಾಷೆ ಮತ್ತು ಸಾಹಿತ್ಯದ ಬಗೆಗೆ ಅಸಕ್ತಿಯಿರುವ ಎಷ್ಟು ಗುಂಪುಗಳಿರುವವೋ ಅಷ್ಟು ರಾಜ್ಯಗಳು ಹುಟ್ಟುವವು. ಇಂತಹ ಪ್ರಯತ್ನದಿಂದ ಭಾರತದ ಒಕ್ಕೂಟಕ್ಕೆ ಮತ್ತು ರಾಷ್ಟ್ರದ ಏಕತೆಗೆ ಧಕ್ಕೆ ಉಂಟಾಗುವ ಸಮಸ್ಯೆಗಳನ್ನು ಸೃಷ್ಟಿಸುತ್ತವೆ ಎಂಬುದು ನಿಜವಿದ್ದರೂ; ಭಾಷೆಯ ಆಧಾರದ ಮೇಲೆ ಆಗುವ ಪ್ರಾಂತ್ಯಗಳ ಪುನರ್ ನಿರ್ಮಾಣದಿಂದ ಕೆಲವು ನಿಶ್ಚಿತ ರಾಜಕೀಯ ಲಾಭಗಳಾಗುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ ಎಂದಿದ್ದಾರೆ. ಕಳೆದ ೭೦ ವರ್ಷಗಳ ರಾಜ್ಯಗಳ ಆಡಳಿತದಲ್ಲಿ ಜನರ ಪಾಲುದಾರಿಕೆಯಿಂದ ಇದು ದೃಢವಾಗುತ್ತದೆ.

### ಡಾ. ಬಿ.ಆರ್ ಅಂಬೇಡ್ಕರ ಅವರು ಎರಡು ಕಾರಣಗಳಿಂದ ಭಾಷವಾರು ರಾಜ್ಯಗಳ ಅಗತ್ಯವಿದೆ[೧೯] ಎಂದಿದ್ದಾರೆ.

೧. ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಪ್ರಜಾಪ್ರಭುತ್ವದ ಮಾರ್ಗಗಳನ್ನು ಸುಲಭಗೊಳಿಸಲು ಅವಶ್ಯಕವಾಗಿದೆ. ಆಯಾ ರಾಜ್ಯಗಳಲ್ಲಿ ಬಹುಪಾಲು ಜನರು ಮಾತನಾಡುವ ಭಾಷೆಯಲ್ಲಿ ಆಡಳಿತ ನಡೆಯುವುದರಿಂದ ಜನರಿಗೆ ಅನುಕೂಲವಾಗುತ್ತದೆ.

೨. ಜನಾಂಗೀಯ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಹೋಗಲಾಡಿಸಲು ಭಾಷಾವಾರು ರಾಜ್ಯಗಳು ಅನುಕೂಲಕರ. ಇಂತಹ ರಾಜ್ಯಗಳು ಜನರಲ್ಲಿ ಏಕರೂಪತೆ, ಏಕತೆ ಮತ್ತು ಸಹೋದರತ್ವವನ್ನು ಖಚಿತಪಡಿಸುತ್ತವೆ.

ಭಾರತ ಸಂವಿಧಾನದ ಮೂರನೇ ವಿಧಿಯ ಪ್ರಕಾರ ನೂತನ ರಾಜ್ಯಗಳ ರಚನೆ ಮತ್ತು ಈಗಿರುವ ರಾಜ್ಯಗಳ, ಪ್ರದೇಶಗಳ, ಸರಹದ್ದುಗಳ ಅಥವಾ ಹೆಸರುಗಳ ಬದಲಾವಣೆ ಮಾಡುವ ಅಧಿಕಾರವನ್ನು ಸಂಸತ್ತು ಹೊಂದಿದೆ. ರಾಜ್ಯ ಪುನರ್ವಿಂಗಡಣಾ ಆಯೋಗವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ೧೯೫೫ರ ವರದಿಯಲ್ಲಿ ಈ ಹಿಂದೆ ಇದ್ದ 'ಎ', 'ಬಿ', 'ಸಿ', 'ಡಿ' ವರ್ಗದ ಪ್ರಾಂತ್ಯಗಳನ್ನು ರದ್ದುಗೊಳಿಸಬೇಕೆಂದು ಶಿಫಾರಸ್ಸು ಮಾಡಿ ಭಾರತದ ಒಕ್ಕೂಟವನ್ನು ೧೬ ರಾಜ್ಯಗಳಾಗಿ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ರಚಿಸಲು ಶಿಫಾರಸ್ಸು ಮಾಡಿತ್ತು.[೨೦] ಅಂಬೇಡ್ಕರ ಅವರು ರಾಜ್ಯ ಪುನರ್ವಿಂಗಡಣಾ ಆಯೋಗವು ಭಾಷೆ ಸಮಸ್ಯೆಯೊಡನೆ ಮಾತ್ರ ವ್ಯವಹರಿಸಿ ರಾಜಕೀಯ ಸಮಸ್ಯೆಯನ್ನು ಮರೆತು ಶಿಫಾರಸ್ಸು ಮಾಡಿರುವ ಭಾಷವಾರು ರಾಜ್ಯಗಳಲ್ಲಿ ಉತ್ತರ ಭಾರತದ ರಾಜ್ಯಗಳನ್ನು ಬಲಪಡಿಸಿ ದಕ್ಷಿಣವನ್ನು

ಒಡೆದಿದೆ ಎಂದು ಟೀಕಿಸಿದ್ದಾರೆ. ಇದರ ಕೆಟ್ಟ ಪರಿಣಾಮಗಳು ಸ್ಪಷ್ಟವಾಗಿ ಗೋಚರಿಸುತ್ತಿರುವುದರಿಂದ ಉತ್ತರದ ಮೂರು ರಾಜ್ಯಗಳಾದ[೨೧] ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತು ಮಧ್ಯ ಭಾರತದ ಮಹಾರಾಷ್ಟ್ರದಂತಹ ದೊಡ್ಡ ದೊಡ್ಡ ರಾಜ್ಯಗಳನ್ನು "ಒಂದು ರಾಜ್ಯ ಒಂದು ಭಾಷೆ" ನಿಯಮವನ್ನು ಅನುಸರಿಸಿ ಸಣ್ಣ ಸಣ್ಣ ಭಾಗಗಳಾಗಿ ವಿಭಜಿಸುವುದೇ ಪರಿಹಾರವೆಂದಿದ್ದಾರೆ. ರಾಜ್ಯ ಪುನರ್ವಿಂಗಡಣಾ ಆಯೋಗವು ರಚಿಸಲು ಉದ್ದೇಶಿದ ರಾಜ್ಯಗಳ ಗಾತ್ರ ಮತ್ತು ಜನಸಂಖ್ಯೆಯನ್ನು ಹೋಲಿಕೆ ಮಾಡಿ ನೋಡಿದಾಗ ವ್ಯತ್ಯಾಸವಿರುವುದು ಸ್ಪಷ್ಟವಾಗುತ್ತದೆ.[೨೨]

- ಜನಸಂಖ್ಯೆಯ ಅಳತೆಯಲ್ಲಿ ೧ ರಿಂದ ೨ ಕೋಟಿ ಜನಸಂಖ್ಯೆಯುಳ್ಳ ೮ ರಾಜ್ಯಗಳಿವೆ.
- ೨ ರಿಂದ ೪ ಕೋಟಿ ಜನಸಂಖ್ಯೆಯುಳ್ಳ ೪ ರಾಜ್ಯಗಳಿವೆ.
- ೪ ಕೋಟಿ ಜನಸಂಖ್ಯೆಗಿಂತ ಹೆಚ್ಚು ಇರುವ ಒಂದು ರಾಜ್ಯವಿದೆ. ಅದು ಮುಂಬೈ ರಾಜ್ಯವಾಗಿದೆ.
- ೬ ಕೋಟಿ ಜನಸಂಖ್ಯೆಗಿಂತ ಹೆಚ್ಚಿರುವ ಒಂದು ರಾಜ್ಯವಿದೆ. ಅದು ಉತ್ತರ ಪ್ರದೇಶ ರಾಜ್ಯವಾಗಿದೆ.

ಬೃಹತ್ ರಾಜ್ಯದಲ್ಲಿ ಒಂದು ಅಥವಾ ಎರಡು ಪ್ರಬಲ ಜಾತಿಗಳಿದ್ದು ಅವುಗಳನ್ನು ಅವಲಂಬಿಸಿದಂತಹ ಕೆಲವೆ ಜಾತಿಗಳಿರುತ್ತವೆ. ಒಂದು ರಾಜ್ಯದ ಜನಸಂಖ್ಯೆಯ ಹೆಚ್ಚಳದಿಂದ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ ನಡುವಿನ ಅಂತರವು ಹೆಚ್ಚಾಗುತ್ತದೆ. ಆದ್ದರಿಂದ ದೊಡ್ಡ ಪ್ರಮಾಣದ ರಾಜ್ಯಗಳಲ್ಲಿ ಒಂದೇ ಭಾಷೆಯನ್ನಾಡುವ ಎಲ್ಲಾ ಜನರನ್ನು ಒಂದುಗೂಡಿಸುವುದರ ಸೂಕ್ತತೆಯನ್ನು ಪ್ರಶ್ನಿಸುತ್ತಾರೆ. ಆದ್ದರಿಂದ ನಿಶ್ಚಿತ ಪ್ರಮಾಣದ ವಿಸ್ತೀರ್ಣ, ಜನಸಂಖ್ಯೆ, ಜನಸಂಖ್ಯೆಗೆ ಸರಿಸಮಾನದ ಆದಾಯವನ್ನು ಹೊಂದಿದ ಒಂದು ರಾಜ್ಯವನ್ನು ಹಲವು ರಾಜ್ಯಗಳನ್ನಾಗಿ ವಿಭಜಿಸಬೇಕೆಂದು ಸಲಹೆ ನೀಡಿದ್ದರು. ಇದರಿಂದ ಬಹುಸಂಖ್ಯಾತರು ಮತ್ತು ಅಲ್ಪಸಂಖ್ಯಾತರ ನಡುವಿನ ಅಂತರವು ಕಡಿಮೆಯಾಗುತ್ತದೆ ಮತ್ತು ಒಕ್ಕೂಟದ ರಾಜ್ಯಗಳ ನಡುವೆ ಸಾಧ್ಯವಾದಷ್ಟು ಸಮತೋಲನ ಕಾಪಾಡಲು ಸಾಧ್ಯವೆಂಬುವುದು ಡಾ. ಬಿ.ಆರ್ ಅಂಬೇಡ್ಕರ್ ನಿಲುವಾಗಿತ್ತು. ಡಾ. ಬಿ.ಆರ್ ಅಂಬೇಡ್ಕರ ಅವರು ಒಂದು ಭಾಷವಾರು ರಾಜ್ಯವನ್ನು ಹಲವು ರಾಜ್ಯಗಳನ್ನಾಗಿ ರಚಿಸುವ ಆಧಾರಾಂಶಗಳೆಂದರೆ[೨೩],

೧. ಸಮರ್ಥ ಆಡಳಿತದ ಅಗತ್ಯಗಳು.
೨. ವಿವಿಧ ಪ್ರದೇಶಗಳ ಅಗತ್ಯಗಳು.
೩. ವಿವಿಧ ಪ್ರದೇಶಗಳಲ್ಲಿರುವ ಭಾವನಾ ಸಮುಚ್ಛಯ.
೪. ಬಹುಸಂಖ್ಯಾತರು ಮತ್ತು ಅಲ್ಪ ಸಂಖ್ಯಾತರ ನಡುವಿನ ಪ್ರಮಾಣ.

ಮೇಲಿನ ಆಧಾರಗಳ ಪ್ರಕಾರ ರಾಜ್ಯಗಳನ್ನು ರಚಿಸುವುದರಿಂದ ಹಲವಾರು ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರ ದೊರೆಯುವುದರ ಮೂಲಕ ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವೆ ಸಮತೋಲನ ಸಾಧಿಸಲು ಸಾಧ್ಯವೆಂದಿದ್ದರು. ಇದಕ್ಕೆ ಪೂರಕವಾಗಿ "ಒಂದು ಗಣತಂತ್ರವು ಸಾರ್ಥಕವಾಗಿ ಕಾರ್ಯನಿರ್ವಹಿಸಲು ಅದರ ಪ್ರತ್ಯೇಕ ಭಾಗಗಳು ಶಕ್ಯವಿದ್ದಷ್ಟು ಸಮಪ್ರಮಾಣದಲ್ಲಿರುವುದು ಅವಶ್ಯಕ" ಎಂಬ ಸಂವಿಧಾನ ರಚನಾ ಸಮಿತಿಯಲ್ಲಿ ಶ್ರೀ. ಫಣಿಕರ್[೨೪] ಮಂಡಿಸಿರುವ ವಿಚಾರವನ್ನು ಡಾ. ಬಿ.ಆರ್ ಅಂಬೇಡ್ಕರ್ ಬೆಂಬಲಿಸಿದ್ದಾರೆ. ಆದ್ದರಿಂದ ೧೯೫೬ ರ ಭಾಷಾವಾರು ರಾಜ್ಯಗಳಿಂದ ಹೆಚ್ಚಿನ ಅಪಾಯಗಳಿವೆ. ಇವುಗಳನ್ನು ಸರಿಪಡಿಸುವ ಅಗತ್ಯವಿದೆ ಎಂದಿರುವ ವಿಷಯಗಳು ಸಂಯುಕ್ತ ವ್ಯವಸ್ಥೆಯೊಳಗಡೆ ಇಂದಿಗೂ ಪ್ರಸ್ತುತವಾಗಿವೆ.

ಸಂಸತ್ತು ಅಂಗೀಕರಿಸಿದ "೧೯೫೬ರ ರಾಜ್ಯ ಪುನರ್ವಿಂಗಡಣಾ ಕಾಯ್ದೆಯ" ಪ್ರಕಾರ ಭಾಷೆಯ ಆಧಾರದ ಮೇಲೆ ೧೯೫೬ರ ನವೆಂಬರ್ ೧ ರಂದು ೧೪ ರಾಜ್ಯಗಳು ಹಾಗೂ ೬ ಕೇಂದ್ರಾಡಳಿತ ಪ್ರದೇಶಗಳು ಅಸ್ತಿತ್ವಕ್ಕೆ ಬಂದವು. ೧೯೫೬ರ ನಂತರ ಭಾರತದಲ್ಲಿ ಅಂತರರಾಜ್ಯ ಗಡಿಗಳನ್ನು ನಿರಂತರವಾಗಿ ಬದಲಾಯಿಸುತ್ತ ಪುನರ್ರಚಿಸಲಾಗಿದೆ ಮತ್ತು ಆ ಪ್ರಕ್ರಿಯೆಯು ಇಂದಿಗೂ ಪೂರ್ಣಗೊಂಡಿಲ್ಲ.[೨೫] ಜೂನ್ ೨೦೧೪ ರಂದು ರಚಿಸಲ್ಪಟ್ಟ 'ತೆಲಂಗಾಣ' ರಾಜ್ಯದೊಂದಿಗೆ ಇಂದು (೨೦೨೧) ಭಾರತದ ಒಕ್ಕೂಟದಲ್ಲಿ ೨೮ ರಾಜ್ಯಗಳು ಹಾಗೂ ೮ ಕೇಂದ್ರಾಡಳಿತ ಪ್ರದೇಶಗಳಿವೆ. ಆದ್ದರಿಂದ ಒಂದು ರಾಜ್ಯ ಒಂದು ಭಾಷೆಯ ನಿಯಮದ ಪಾಲನೆಯಾಗುವುದರ ಮೂಲಕ ಅಂದರೆ ಆಡಳಿತದ ಅನುಕೂಲತೆ, ಅಲ್ಪಸಂಖ್ಯಾತರ ಹಿತರಕ್ಷಣೆ, ಉತ್ತರ ಮತ್ತು ದಕ್ಷಿಣ ರಾಜ್ಯಗಳ ಸಮತೋಲನತೆ ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

೧೯೫೬ರ ನಂತರವೂ ರಾಜ್ಯಗಳನ್ನು ಪುನರ್ರಚಿಸುವಂತಹ ಪ್ರಕ್ರಿಯೆಗಳು ಭಾರತದ ಒಕ್ಕೂಟದಲ್ಲಿ ನಡೆದಿವೆ. ದ್ವಿಭಾಷಾ ರಾಜ್ಯವಾಗಿದ್ದ ಮುಂಬೈನಲ್ಲಿ ಮರಾಠಿ ಮಾತನಾಡುವವರ ಮತ್ತು ಗುಜರಾತಿ ಮಾತನಾಡುವವರ ನಡುವೆ ಘರ್ಷಣೆ ಉಂಟಾಗಿ ಪ್ರತ್ಯೇಕ ರಾಜ್ಯಗಳಿಗೆ ಭಾಷಾ ಪ್ರೇಮಿಗಳು ಹೋರಾಡಿದರು. ಆದ್ದರಿಂದ ಭಾಷೆಯ ಮಾನದಂಡದ ಆಧಾರದ ಮೇಲೆ ಪ್ರಜೆಗಳ ನಡುವೆ ಉಂಟಾದ ಬಿನ್ನಾಭಿಪ್ರಾಯಗಳು ಪ್ರತ್ಯೇಕ ರಾಜ್ಯಗಳ ರಚನೆಗೆ ನಾಂದಿಯನ್ನು ಹಾಡಿದವು. ಭಾಷಾವಾರು ರಾಜ್ಯಗಳ ರಚನೆಯ ಬೇಡಿಕೆಯೆಂಬುದು ಮೊದಲು ಬಾಂಬೆಯಲ್ಲಿ ಜರುಗಿತು.[೨೬] 'ಸಂಯುಕ್ತ ಮಹಾರಾಷ್ಟ್ರ ಸಮಿತಿ' ಮತ್ತು 'ಮಹಾಗುಜರಾತ್ ಜನತಾ ಪರಿಷತ್ತು'ಗಳು ಬಾಂಬೆಯನ್ನು ಎರಡು ರಾಜ್ಯಗಳನ್ನಾಗಿ ಮಾಡಬೇಕೆಂದು ಹೋರಾಡಿದರು. ಪರಿಣಾಮವಾಗಿ ಭಾರತ ಸಂಸತ್ತು ಬಾಂಬೆ ರಿಆರ್ಗನೈಜೇಷನ್ ಆ್ಯಕ್ಟ್ ಜಾರಿಗೆ ತಂದು ಮೇ ೧, ೧೯೬೦ ರಂದು 'ಗುಜರಾತ್' ಮತ್ತು 'ಮಹಾರಾಷ್ಟ್ರ' ರಾಜ್ಯಗಳಾಗಿ ಪ್ರತ್ಯೇಕಿಸಲಾಯಿತು. ನಾಗಾಬೆಟ್ಟಗಳು ಮತ್ತು ತುಯ್ಯೆನ್‌ಸಾಂಗ್ ಪ್ರದೇಶವನ್ನು ಒಳಗೊಂಡ 'ನಾಗಾಲ್ಯಾಂಡ್' ೧೬ನೇ ರಾಜ್ಯವಾಗಿ ಡಿಸೆಂಬರ್ ೧, ೧೯೬೩ ರಂದು ಜಾರಿಗೆ ಬಂದಿತು.[೨೭]

ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ರಚನೆಯಾದ ನಂತರ ಪಂಜಾಬಿನ ಅಕಾಲಿದಳವು 'ಪಂಜಾಬಿ ಸುಬಾ'ದ ರಚನೆಗಾಗಿ ತನ್ನ ಬೇಡಿಕೆಯನ್ನು ತೀವ್ರಗೊಳಿಸಿತು. ಆದ್ದರಿಂದ ಕೇಂದ್ರ ಸರ್ಕಾರವು ಅಕಾಲಿದಳದ ಬೇಡಿಕೆಯನ್ನು ಪರಿಶೀಲಿಸಲು 'ಹಕುಮ್‌ಸಿಂಗ್' ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ಮಾರ್ಚ್ ೧೫, ೧೯೬೬ ರಂದು ತನ್ನ ವರದಿಯನ್ನು ಸಿದ್ಧಪಡಿಸಿ, ಪಂಜಾಬಿನ ಜನರ ಹಿತದೃಷ್ಟಿಯಿಂದಲೂ ಮತ್ತು ದೇಶದ ಹಿತದೃಷ್ಟಿಯಿಂದಲೂ ಪಂಜಾಬ್‌ನ್ನು ಭಾಷೆಯ ಆಧಾರದ ಮೇಲೆ ಪುನರ್ರಚಿಸಬೇಕೆಂದು ಶಿಫಾರಸು ಮಾಡಿತು. ಕೇಂದ್ರ ಸರ್ಕಾರ ಈ ಸಮಿತಿಯ ಶಿಫಾರಸುಗಳನ್ನು ಅಂಗೀಕರಿಸಿ, ಪಂಜಾಬ್ ಮತ್ತು ಹರಿಯಾಣಗಳ ನಡುವೆ ಗಡಿ ರೇಖೆಯನ್ನು ಗೊತ್ತುಪಡಿಸಲು 'ಗಡಿ ಸಮಿತಿ'ಯನ್ನು ೧೯೬೬ರ ಏಪ್ರಿಲ್ ತಿಂಗಳಿನಲ್ಲಿ ನೇಮಿಸಿತು. ಚಂಡೀಗಢವನ್ನು ಹರಿಯಾಣಕ್ಕೆ ವರ್ಗಾಯಿಸಬೇಕೆಂದು ಈ ಸಮಿತಿ ಶಿಫಾರಸ್ಸು ಮಾಡಿತು. ಆದರೆ ಕೇಂದ್ರ ಸರ್ಕಾರ ಅದನ್ನು ಒಪ್ಪದೆ, ಚಂಡೀಗಢವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಲು ಇಚ್ಛಿಸಿತು ಮತ್ತು ಎರಡು ರಾಜ್ಯಗಳ ರಾಜಧಾನಿಯಾಗಿ ಮಾಡಿತು. "ಪಂಜಾಬ್ ಪುನರ್ರಚನಾ ಕಾಯ್ದೆ" ನವೆಂಬರ್ ೧, ೧೯೬೬ ರಂದು ಜಾರಿಗೆ

ಬಂದು ‘ಪಂಜಾಬ್’ ಮತ್ತು ‘ಹರಿಯಾಣ’ ರಾಜ್ಯಗಳಾಗಿ ರೂಪಗೊಂಡವು.[೨೮] ಕೇಂದ್ರಾಡಳಿತ ಪ್ರದೇಶವಾಗಿದ್ದ ‘ಹಿಮಾಚಲ ಪ್ರದೇಶ’[೨೯] ಜನೇವರಿ ೧೯೭೧ ರಲ್ಲಿ ರಾಜ್ಯದ ಸ್ಥಾನಮಾನ ಪಡೆದು ೧೮ನೇ ರಾಜ್ಯವಾಯಿತು.

೧೯೭೧ ರಲ್ಲಿ ಸಂಸತ್ತು ಈಶಾನ್ಯ ಪ್ರದೇಶಗಳ ಪುನರ್ರಚನಾ ಮಸೂದೆಯನ್ನು ಅಂಗೀಕರಿಸಿ, ಇದನ್ನು ೧೯೭೨ ರಲ್ಲಿ ಜಾರಿಗೆ ತಂದು ಮೇಘಾಲಯ, ಮಣಿಪುರ, ತ್ರಿಪುರ ರಾಜ್ಯಗಳನ್ನಾಗಿ ಹಾಗೂ ಅರುಣಾಚಲ ಪ್ರದೇಶ ಮತ್ತು ಮಿಝೋರಾಂ ಕೇಂದ್ರಾಡಳಿತ ಪ್ರದೇಶಗಳನ್ನಾಗಿ ರಚಿಸಿತು.

ಆಗಸ್ಟ್ ೧೬, ೧೯೬೨ ರಲ್ಲಿ ಪುದುಚೇರಿ ಫ್ರೆಂಚ್‌ರಿಂದ ಸ್ವಾತಂತ್ರ್ಯ ಪಡೆದು ಭಾರತದ ಒಕ್ಕೂಟದಲ್ಲಿ ಕೇಂದ್ರಾಡಳಿತ ಪ್ರದೇಶವಾಗಿ ಸೇರ್ಪಡೆಗೊಂಡಿತು. ಭಾರತದ ಜೊತೆ ನಿಕಟ ಸಂಬಂಧವನ್ನು ಹೊಂದಿದ್ದ ‘ಸಿಕ್ಕಿಂ’ ಸೆಪ್ಟೆಂಬರ್ ೭, ೧೯೭೪ ರಂದು ಅಸೋಸಿಯೇಟ್ ಸ್ಟೇಟ್[೩೦] ಸ್ಥಾನ ಪಡೆದು ೧೯೭೫ ರಂದು ತನ್ನ ಇಚ್ಛೆಗೆ ಅನುಸಾರವಾಗಿ ಭಾರತದ ಒಕ್ಕೂಟದಲ್ಲಿ ವಿಲೀನಗೊಂಡ ರಾಜ್ಯದ ಸ್ಥಾನಮಾನ ಪಡೆಯಿತು. ಕೇಂದ್ರಾಡಳಿತ ಪ್ರದೇಶಗಳಾಗಿದ್ದ ‘ಮಿಜೋರಾಂ’ ಮತ್ತು ‘ಅರುಣಾಚಲ’ ಪ್ರದೇಶ ಫೆಬ್ರುವರಿ ೨೦, ೧೯೮೭ ರಂದು ಕ್ರಮವಾಗಿ ೨೩ ಮತ್ತು ೨೪ನೇ ರಾಜ್ಯಗಳಾದವು.

ಸುಮಾರು ೪೫೦ ವರ್ಷಗಳ ಕಾಲ ‘ಪೋರ್ಚುಗೀಸ್’ರ ಅಧೀನದಲ್ಲಿದ್ದ ಗೋವಾ ಡಿಸೆಂಬರ್ ೧೯, ೧೯೬೧ ರಂದು ಸ್ವಾತಂತ್ರ್ಯ ಪಡೆದು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು ಹಾಗೂ ಮೇ ೩೦, ೧೯೮೭ ರಂದು ೨೫ನೇ ರಾಜ್ಯದ ಸ್ಥಾನಮಾನವನ್ನು ಭಾರತದ ಒಕ್ಕೂಟದಲ್ಲಿ ಪಡೆದುಕೊಂಡಿತು.

ನವೆಂಬರ್ ೨೦೦೦ ದಲ್ಲಿ ಕೇಂದ್ರದಲ್ಲಿದ್ದ ಎನ್.ಡಿ.ಎ. (ಓಆಂ) ಮೈತ್ರಿಕೂಟದ ಆಳ್ವಿಕೆಯಲ್ಲಿ ಮೂರು ರಾಜ್ಯಗಳನ್ನು ರಚಿಸಲಾಯಿತು. ಮಧ್ಯಪ್ರದೇಶದ ಪೂರ್ವಕ್ಕಿರುವ ೧೬ ಜಿಲ್ಲೆಗಳನ್ನೊಳಗೊಂಡ ‘ಛತ್ತಿಸ್‌ಗಢ್’ (ಛತ್ತೀಸ್‌ಗರ್) ಮತ್ತು ಉತ್ತರ ಪ್ರದೇಶದ ಪಶ್ಚಿಮಕ್ಕಿರುವ ೧೩ ಜಿಲ್ಲೆಗಳನ್ನೊಳಗೊಂಡ ‘ಉತ್ತರಾಂಚಲ್’ (ಉತ್ತರಖಾಂಡ) ಹಾಗೂ ದಕ್ಷಿಣ ಬಿಹಾರ್‌ದಿಂದ ಬೇರ್ಪಡಿಸಿದ ‘ಜಾರ್ಖಂಡ್’ ಕ್ರಮವಾಗಿ ೨೬, ೨೭, ೨೮ನೇ ರಾಜ್ಯಗಳಾಗಿ ೨೦೦೦ ದಲ್ಲಿ ಅಸ್ತಿತ್ವಕ್ಕೆ ಬಂದವು.

‘ಒಂದು ರಾಜ್ಯ ಒಂದು ಭಾಷೆ’ ಎಂಬ ವಿಚಾರಶಕ್ತಿಯುಳ್ಳ ಮಾನದಂಡದ ಮೇಲೆ ಉತ್ತರಪ್ರದೇಶ, ಬಿಹಾರ್, ಮಧ್ಯಪ್ರದೇಶ ಮತ್ತು ಆಂಧ್ರಪ್ರದೇಶವನ್ನು ವಿಭಜಿಸಿ ಛತ್ತೀಸ್‌ಗಢ್, ಉತ್ತರಾಂಚಲ, ಜಾರ್ಖಂಡ್, ತೆಲಂಗಾಣ ರಾಜ್ಯಗಳನ್ನಾಗಿ ಸೃಷ್ಟಿಸಿದ್ದು ಆರೋಗ್ಯಕರ ಪ್ರಕ್ರಿಯೆಯಾಗಿದೆ. ಇದು ಹಳೆಯ ಮತ್ತು ಪ್ರಾಂತೀಯ ಪರಿಕಲ್ಪನೆಯಾಗಿದ್ದು, ಈ ವಾಸ್ತವಿಕ ಮಾರ್ಗವು ಭವಿಷ್ಯದ ರಾಜ್ಯಗಳ ಪುನರ್ರಚನೆಯ ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರವಾಗಬಹುದು.[೩೧]

ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿ ಮತ್ತು ರಾಜ್ಯಗಳ ಪುನರ್ವಿಂಗಡಣೆಯ ಸಂದರ್ಭದಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ಮಾಡಿದ್ದ ‘ತೆಲಂಗಾಣ’ ಪ್ರದೇಶವು ೧೯೫೬ರ ಕಾಯ್ದೆಯ ಪ್ರಕಾರ ತೆಲಗು ಭಾಷೆಯ ಮಾನದಂಡದ ಮೇಲೆ ವಿಶಾಲಾಂಧ್ರದಲ್ಲಿ ಸೇರ್ಪಡೆಗೊಂಡಿತ್ತು. ಆದರೆ ೨೦೧೪ರ ‘ಆಂಧ್ರ ರಿಆರ್ಗನೈಜೇಷನ್ ಆ್ಯಕ್ಟ್’ ಪ್ರಕಾರ ಆಂಧ್ರ ರಾಜ್ಯದಿಂದ ಪ್ರತ್ಯೇಕಗೊಂಡ ‘ತೆಲಂಗಾಣ ರಾಜ್ಯ’ವಾಗಿ ಜೂನ್ ೨, ೨೦೧೪ ರಂದು ಭಾರತದ ೨೯ನೇ ರಾಜ್ಯವಾಗಿ ಜಾರಿಗೆ ಬಂದಿತು.[೩೨] ಹೈದರಾಬಾದ್ ೧೦ ವರ್ಷಗಳ ಕಾಲ ಎರಡು ರಾಜ್ಯಗಳ ರಾಜಧಾನಿಯನ್ನಾಗಿ ಮಾಡಲಾಗಿದೆ. ಆಗಸ್ಟ್ ೫, ೨೦೧೯ ರಂದು ಭಾರತ ಸರ್ಕಾರವು[೩೩] ಸಂವಿಧಾನದ ೩೭೦ನೇ ವಿಧಿಯನ್ನು ರದ್ದುಪಡಿಸುವುದರ ಮೂಲಕ ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ಮತ್ತು ರಾಜ್ಯದ ಸ್ಥಾನಮಾನವನ್ನು ರದ್ದುಗೊಳಿಸಿ ಅದನ್ನು ಕೇಂದ್ರಾಡಳಿತ ಪ್ರದೇಶವಾಗಿ ಮಾರ್ಪಡಿಸಿದೆ. ಆದ್ದರಿಂದ ಇಂದು ಭಾರತದ ಒಕ್ಕೂಟದಲ್ಲಿ ೨೮ ರಾಜ್ಯಗಳಿವೆ.

ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಿಂದ ವಿಭಜನೆ ಹೊಂದಿ ೨೦೦೦ ವರ್ಷದಲ್ಲಿ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದ ಜಾರ್ಖಂಡ್, ಛತ್ತೀಸ್‌ಗರ್ ಮತ್ತು ಉತ್ತರಾಖಂಡ ಮತ್ತು ಇತ್ತೀಚಿನ ತೆಲಂಗಣಾ ರಾಜ್ಯಗಳ ರಚನೆಯಲ್ಲಿ ಒಂದು ರಾಜ್ಯ ಒಂದು ಭಾಷೆಯ ನಿಯಮದ ಪಾಲನೆಯಾಗಿರುವುದು ತಿಳಿದುಬರುತ್ತದೆ. ಈ ರಾಜ್ಯಗಳು ಮೂಲ ರಾಜ್ಯಗಳಿಗಿಂತ ಕ್ಷಿಪ್ರಗತಿಯಲ್ಲಿ ಸಾಕ್ಷರತೆ, ತಲಾ ಆದಾಯ, ನೀರಾವರಿ ಮೂಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ.[೩೪]

**ರಾಜ್ಯಗಳ ತಲಾ ಆದಾಯದ ಚಿತ್ರಣ**

| ರಾಜ್ಯದ ಹೆಸರು | ತಲಾ ಆದಾಯ ೨೦೦೦-೨೦೦೧ (ರೂಪಾಯಿಗಳಲ್ಲಿ) | ತಲಾ ಆದಾಯ ೨೦೧೦-೨೦೧೧ (ರೂಪಾಯಿಗಳಲ್ಲಿ) | ತಲಾ ಆದಾಯದ ಹೋಲಿಕಾ ಪ್ರಮಾಣ |
|---|---|---|---|
| ಬಿಹಾರ | ೬,೫೫೪ | ೧೩೬೩೬ | ೨ |
| ಜಾರ್ಖಂಡ್, | ೯,೯೮೦ | ೨೧,೭೩೪ | ೨.೧ |
| ಮಧ್ಯಪ್ರದೇಶ | ೧೧,೧೫೦ | ೨೨,೩೮೨ | ೨ |
| ಛತ್ತೀಸ್‌ಗರ್ | ೧೦,೮೦೮ | ೨೭,೧೫೬ | ೨.೫ |
| ಉತ್ತರ ಪ್ರದೇಶ | ೯,೭೨೧ | ೧೭,೩೪೯ | ೧.೭ |
| ಉತ್ತರಾಖಂಡ | ೧೪,೯೩೨ | ೪೪,೭೨೩ | ೩ |

ಆಧಾರ – ನೀತಿ (ಯೋಜನಾ) ಆಯೋಗ

ಮೇಲಿನ ಅಂಕಿಅಂಶಗಳನ್ನು ಪರಿಶೀಲಿಸಿದಾಗ ಡಾ. ಬಿ.ಆರ್ ಅಂಬೇಡ್ಕರ್ ಅವರು ಹೇಳುವಂತೆ ದೊಡ್ಡ ರಾಜ್ಯಗಳನ್ನು ಸಣ್ಣ ರಾಜ್ಯಗಳನ್ನಾಗಿ ವಿಭಜಿಸುವುದರಿಂದ ಒಂದು ರಾಜ್ಯ ಒಂದು ಭಾಷೆಯ ನಿಯಮದ ಪಾಲನೆಯ ಜೊತೆಗೆ ಪ್ರಜಾಪ್ರಭುತ್ವದ ಸುಗಮ ಕಾರ್ಯಾಚರಣೆ ಸಾಧ್ಯವಾಗುವುದರ ಮೂಲಕ ಅಭಿವೃದ್ಧಿ ಸಾಧ್ಯವಿದೆ ಎಂಬುವುದು ದೃಢವಾಗುತ್ತದೆ.

**ಸಮಾರೋಪ :**

ಭಿನ್ನ ಜನಾಂಗ, ಭಾಷೆಗಳಿಂದ ಕೂಡಿದ ಅಥವಾ ಕಲಬೆರೆಕೆಯ ರಾಜ್ಯಕ್ಕಿಂತ ಒಂದೇ ಜನಾಂಗದಿಂದ ಕೂಡಿದ ಭಾಷಾವಾರು ರಾಜ್ಯವು ಪ್ರಜಾಪ್ರಭುತ್ವದ ಕಾರ್ಯಾಚರಣೆಗೆ ಅನುಕೂಲಕರವಾದದು. ಇಂತಹ ರಾಜ್ಯಗಳು ಜನರಲ್ಲಿ ಏಕರೂಪತೆ, ಏಕತೆ ಮತ್ತು ಸಹೋದರತ್ವವನ್ನು ಖಚಿತಪಡಿಸುತ್ತವೆ. ರಾಜಕೀಯವಾಗಿಯು ಒಕ್ಕೂಟ ವ್ಯವಸ್ಥೆಯಲ್ಲಿನ ಘಟಕ ರಾಜ್ಯಗಳು ಸಾಧ್ಯವಾದಷ್ಟು ಸಮಪ್ರಮಾಣದಲ್ಲಿರಬೇಕೆಂಬುದು ಪ್ರತಿಪಾದಿಸುವುರ ಮೂಲಕ ಅಲ್ಪಸಂಖ್ಯಾತರ ಹಿತರಕ್ಷಣೆಗೂ ಆದ್ಯತೆ ನೀಡಿದ್ದರು. ಉತ್ತರ ಭಾರತ ಮತ್ತು ದಕ್ಷಿಣ ಭಾರತ ರಾಜ್ಯಗಳ ಮಧ್ಯೆ ಸಮತೋಲನತೆ ಕಾಪಾಡಲು "ಒಂದು ರಾಜ್ಯ ಒಂದು ಭಾಷೆ" ನಿಯಮದ ಪಾಲನೆಗೆ ಮತ್ತು ರಾಷ್ಟ್ರೀಯ ಏಕತೆಗೂ ಅಂಬೇಡ್ಕರ ಆದ್ಯತೆ ನೀಡಿದ್ದರು. ಈ ಇಲ್ಲ ವಾಸ್ತವಿಕ ಅಂಶಗಳಿಂದ ಡಾ. ಬಿ.ಆರ್. ಅಂಬೇಡ್ಕರ ಅವರ ಭಾಷಾವಾರು ರಾಜ್ಯಗಳ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ ಎಂಬುದನ್ನು ದೃಢೀಕರಿಸುತ್ತವೆ.

***ಅಡಿ ಟಿಪ್ಪಣಿ :***

---

[1]Bhadrage Suresh Krishna, "Dr. B.R Ambedkar Thoughts on Linguistic State of India", International Journal of Multidisciplinary Research and Development, Online, ISSN 2349-4182, www. alsubjectjournal.com, accessed on 24-06-2020.

[2] King, Robert, D., ***Nehru and the Language Politics of India***, Oxford University Press, Delhi, 1997, P, 52.

[೩] ***ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ-೦೧,*** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೫, ಪುಟ, ಥಾ

[೪] ಬಣಕಾರ, ಮಹದೇವ., ***ಆಂಗ್ಲರ ಆಡಳಿತದಲ್ಲಿ ಕನ್ನಡ***, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೬, ಪುಟ, ೧.

[೫] ಅದೇ,

[6] Report of the States Reorganisation Commission, 1955. P, 13.

[7] §tPÁgÀ, ªÀÄºÀzÉÃªÀ., <u>G¯ÉèÃTvÀ</u>, ¥ÀÄl, 2.

[8] CzÉÃ.

[9] Rai, Anuradha., ***State Reoerganisation in India: Real Politicking or Electoral Politics,*** <u>The Indian Journal of Political Science</u>, Volume LXXIII, No. 2, October-December 2012, P, 664-671.

[೧೦] ***ಭಾರತದ ಜನಭಾಷೆಗಳ ಸರ್ವೇಕ್ಷಣೆ,*** ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ – ೧೭/೦೭/೨೦೧೩, ಪುಟ, ೦೯.

[11] ***People Linguistic Survey of India***. https//en.wikipedia, accassed -27-07-2016.

[12] §tPÁgÀ, ªÀÄºÀzÉÃªÀ., <u>G¯ÉèÃTvÀ</u>, ¥ÀÄl, 3.

[13] CzÉ, ¥ÀÄl, 4.

[೧೪] ಮೋಹನ್ ಕೃಷ್ಣ ರೈ. ಕೆ., ***ಭಾಷಾವಾರು ಪ್ರಾಂತ್ಯಗಳ ರಚನೆ : ಬೇಡಿಕೆ ಮತ್ತು ಸಮಸ್ಯೆಗಳು***, ಇದರಲ್ಲಿ ತಂಬಂಡ, ಪೂಣಚ್ಚ, ವಿಜಯ್., **(ಸಂಪಾದಕರು),** ***ಭಾರತ ಉಪಖಂಡದ ಆಧುನಿಕ ಚರಿತ್ರೆ ವಿವಿಧ ಆಯಾಮಗಳು,*** ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೧೦, ಪುಟಗಳು, ೩೮೭-೩೯೧.

[15] Vijapur, Abdulrahim P., (Ed), ***Dimension of Federal Nation Building,*** Manak Publication (p) Ltd, 1998, Pp, 148-151.

[೧೬] ಮಹಾಬಲೇಶ್ವರಪ್ಪ, ಬಿ.ಸಿ., ***ಹೈದರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು***, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪುಟ, ೧೨೬.

[೧೭] ***ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು, ಸಂಪುಟ-೦೧,*** ಉಲ್ಲೇಖಿತ, ಪುಟ, ಥಾ

[೧೮] ಅದೇ.

[೧೯] ಅದೇ, ಪುಟ, 166.

೨೦ ಅದೇ, ಪುಟ, 162.

[೨೧] ಅದೇ, ಪುಟ, 173.

[೨೨] ಅದೇ, ಪುಟ, 162.

[೨೩] ಅದೇ, ಪುಟ, 190.

[೨೪] ಅದೇ, ಪುಟಗಳು, 168-169.

[25] Singh, Iqbal., ***Dynamics of Federalism in India and Nation Building Process***, <u>The Indian Journal of Politicas,</u> Vol. 48, Nos, 3-4, July-December 2014, P, 7.

[26] Chhabra, Harinder, K, ***State Politics in India (A study of centre-state relations),*** Surjeet Publications, New Delhi, 1977, P, 80.

[27] Ibid, P, 80.

[28] ***Punjab Reorganization Act 1966.***

[29] ***State of Himachala Pradesh Act, 1970.***

[30] Chhabra, Harinder, K., <u>op. cit.</u> P, 83.

[31] Reddi, Narayan, M., Ex-M.P, ***Congress Policies on Reorganisation of States: A Critical Review,*** <u>Xa.yimg.com,</u> P, 9. Accessed o February, 2017.

[32] Shiekh, Vakil, T., ***Division and Formation of Smaller States in India,*** The Indian Journal of Political Science, Volume LXXVI, No. 4, October-December 2015, P, 905.

[33] The Gazate of India, 5th August, 2019

[34] https://leftrightcentreweb.wordpress.com/2017/07/30/creation-of-smaller-states-and-the-consequent-administrative-economic-and-developmental-implications. Accessed on 29-06-2020.